MYSORE LEGISLATIVE ASSEMBLY

Tuesday, 12th October 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Village Accountants.

*Q.—345. SRI H. R. KESHAVA MURTHY (Gandasi).—

Will the Government be pleased to state :—

(*a*) the number of village Accountants appointed in each District since 1962 ;

(*b*) the work assigned to them now and under whose control they are working ;

(*c*) what is their grades of pay for the present ;

(*d*) whether they intend to enhance their pay in view of their heavy responsibility financially and otherwise ?

*A.—SRI M. V. KRISHNAPPA (Minister for Revenue).—

Bangalore		*Mysore*		*Belgaum*		*Gulbarga*		*Total*
Bangalore Rural	135	Mysore	110	Karwar	43	Gulbarga	165	2,969
Bangalore (Urban)	6	Mandya	233	Dharwar	36	Raichur	135	
Chitradurga	280	Hassan	235	Bijapur	21	Bidar	169	
Bellary	56	Chikmagalur	99	Belgaum	69		469	
Kolar	215	Shimoga	246		169			
Tumkur	439	S. Kanara	264					
	1,131	Coorg	13					
			1,200					

(SRI M. V. KRISHNAPPA)

Bangalore	*Mysore*	*Belgaum*	*Gulbarga*
(*b*) Panchayat Secretaries in addition to the duties of Village Accountant. Village Accountants are under the control of Tahsildars. V.P. Secretaries are under the control of Executive Officers.	Same as in Bangalore.	Under the control of Tahsildar.	Same as in Bangalore.
(*c*) Rs. 65-1-70-2-80-3-110.	Same grade as in Bangalore.	Gr. I 70-2-80-3-110-4-130. Rs. 65-1-70-2-80-3-110.	Same as in Bangalore.

(*d*) There is no proposal at present to enhance the pay scales as the Mysore Village Offices Abolition Act, 1961, is being challenged in the Supreme Court.

ಶ್ರೀ ಎಚ್. ಆರ್. ಕೇಶವಮೂರ್ತಿ.—ಏರೇಜು ಅಕೌಂಟೆಂಟುಗಳು ಕೆಲವು ಕಡೆ ಇದ್ದಾರೆ, ಕೆಲವು ಕಡೆ ಶಾನುಭೋಗರುಗಳಿದ್ದಾರೆ. ಈ ಹೊಸಬರನ್ನು ನೇಮಕ ಮಾಡಿರುವುದರಿಂದ, ಎಷ್ಟು ಜನ ಹಳೆಯ ಅಕೌಂಟೆಂಟುಗಳನ್ನು ರಿಪ್ಲೇಸ್ ಮಾಡಿದ್ದೀರಿ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ಹಳೆಯ ಏರೇಜ್ ಅಕೌಂಟೆಂಟುಗಳೆಂದರೆ ಶಾನುಭೋಗರು. ಶಾನುಭೋಗರು, ಪಟೇಲರು ಇವರ ಹೆರಿಡಿಟರಿ ರೈಟ್ ಅಬಾಲಿಶ್ ಆದದ್ದನ್ನು ಥಾರೆಂಜ್ ಮಾಡಿ ಹೈಕೋರ್ಟಿಗೆ ಹೋದಾಗ, ಹೈಕೋರ್ಟ್ ಸ್ಟೇ ಕೊಟ್ಟು, ಗವರ್ನ್‌ಮೆಂಟ್ ಪರವಾಗಿ ತೀರ್ಮಾನ ಕೊಟ್ಟರು. ಅಪೀಲೆ ಅವರು ಸುಪ್ರೀಂ ಕೋರ್ಟಿಗೆ ಹೋದರು. ಆದ್ದರಿಂದ ಮೈನೂರು ಸಂಸ್ಥಾನದಲ್ಲಿ, ಸುಪ್ರೀಂ ಕೋರ್ಟು ತೀರ್ಮಾನವಾದ ಮೇರೆ ನಯೆ ಶಾನುಭೋಗರು ಕೆಲಸಕ್ಕೆ ಬರುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ತರಹ ಒಂದು ಆಫೀಸನ್ನು ಡೂಪ್ಲಿಕೇಟ್ ಮಾಡಿರುವುದರಿಂದ, 1962ನೇ ಇಸವಿಯಿಂದ ಸರ್ಕಾರಕ್ಕೆ ಎಷ್ಟು ಲಕ್ಷ ರೂಪಾಯಿ ಲುಕ್ಸಾನು ಆಗಿದೆ ? ಅವರಿಗೆ ಸಂಬಳ ಕೊಟ್ಟು ಕೆಲಸ ತೆಗೆದುಕೊಳ್ಳದೆ ಇದ್ದೀರಿ. ಕೆಲವು ಕಡೆ ಏರೇಜ್ ಪಂಚಾಯಿತಿ ಸೆಕ್ರೆಟರಿಗಳು ನಾಮುಕಾವಾಸ್ತೆ ಇದ್ದಾರೆ. ಆದ್ದರಿಂದ 1962 ರಿಂದ ಎಷ್ಟು ಖರ್ಚಾಗಿದೆ, ಎಷ್ಟು ಲುಕ್ಸಾನು ಆಗಿದೆ ಇವರಿಂದ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥದ್ದೇನೂ ಸರ್ಕಾರಕ್ಕೆ ನಷ್ಟವಾಗಿಲ್ಲ. ಏರೇಜು ಅಕೌಂಟೆಂಟುಗಳು ಅಕೌಂಟ್ ಮಾಡುವುದರಲ್ಲಿ ಅನುಭವ ಪಡೆದುಕೊಳ್ಳುತ್ತಾ ಇದ್ದಾರೆ. ಪಂಚಾಯಿತಿ ಕೆಲಸ ಈಗ ದೊಡ್ಡದಾಗಿದೆ. ಅನೇಕ ಕಡೆ ಇತರ ಸೆಕ್ರಟರಿಗಳು ಡಿಪೋಗಳನ್ನು ನಡೆಸುತ್ತಿದ್ದಾರೆ, ಕಂದಾಯ ವಸೂಲಿ ಮಾಡುತ್ತಿದ್ದಾರೆ. ಅಮರಾಯಿ ಉತ್ಪತ್ತಿ ಹೆಚ್ಚಿಸಿದ್ದಾರೆ. ಮರಮುಟ್ಟ ಬದ್ದು ಹೋದರೆ ಅದನ್ನು ಹರಾಜು ಹಾಕುತ್ತಾರೆ. ಈ ಸೆಕ್ರೆಟರಿಗಳು ಬಂದಮೇಲೆ ನಮ್ಮ ಕಾರ್ಯ ಬಹಳ ಚೆನ್ನಾಗಿ ನಡೆಯುತ್ತಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಬೆಂಗಳೂರಿನಲ್ಲಿ ಮೈನೂರಿನಲ್ಲಿ, ಮತ್ತು ಗುಲ್ಬರ್ಗದಲ್ಲಿ ಒಂದು ತರಹ ಸಂಬಳ ಇದೆ. ಆದರೆ ಬೆಳಗಾವಿನಲ್ಲಿ ಕಡಿಮೆ ಕೊಡುವುದಕ್ಕೆ ಕಾರಣವೇನು ? ಒಂದೇ ರೀತಿಯ ಸ್ಕೇಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

†Indicates that the speeches or remarks have not been revised by the member concerned

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳಗಾವಿಯನ್ನೆಲ್ಲ ತಲಾಟಿಗಳಿದ್ದಾರೆ; ಇಲ್ಲಿ ತಲಾಟಿ ಪದ್ಧತಿ ಈಗ ಬರುತ್ತಾ ಇದೆ. ಸಂಸ್ಥಾನದಲ್ಲ ಯೂನಿಫಾರಂ ಸಿಸ್ಟಮ್ ಬಂದಮೇಲೆ, ಹೇಸ್ಕೇಲುಗಳಲ್ಲಿ ಏನಾದರೂ ಡಿಸ್‌ಪ್ಯಾರಿಟಿ ಇದ್ದರೆ, ಅದನ್ನು ಸರಕಾರ ಪರಿಶೀಲನೆ ಮಾಡುತ್ತದೆ.

Sri J. P. SARVESH.—May I know the number of Accountants who have already been trained ?

Sri M. V. KRISHNAPPA.—Figures have been given; nearly three thousand people have been trained.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಪಂಚಾಯಿತಿ ಕಾರ್ಯದರ್ಶಿಗಳ ಕಾರ್ಯ ಸಮರ್ಪಕವಾಗಿಲ್ಲ ಎಂದು ತಮಗೆ ಏನಾದರೂ ವರದಿ ಬಂದಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಮ್ಮಲ್ಲ ಕೆಲವುಕಡೆ ಸಮರ್ಪಕವಾಗಿಲ್ಲದಿರಬಹುದು. ಸಾಮಾನ್ಯವಾಗಿ ಆ ಕೆಲಸದಲ್ಲಿ ಉತ್ಸಾಹಶಾಲಿ ಯುವಕರಿದ್ದಾರೆ, ಅವರು 8 ತಿಂಗಳು ತರಬೇತಿ ಪಡೆದಿದ್ದಾರೆ. ಅನೇಕಕಡೆ ವಿಲೇಜ್ ಪಂಚಾಯಿತಿ ಸೆಕ್ರೆಟರಿಗಳು ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—(ಸಿ)ಗೆ ಉತ್ತರವಾಗಿ ವಿಲೇಜ್ ಅಕೌಂಟೆಂಟುಗಳ ಸ್ಕೇಲುಗಳನ್ನು ಕಾಣಿಸಿದ್ದೀರಿ. ಇದನ್ನು ಯಾವಾಗ ಜಾರಿಗೆ ಕೊಡಲಾಯಿತು ? ಅದೇ ರೀತಿ, ಶಾನುಭೋಗರೂ, ಪಂಚಾಯಿತಿ ಸೆಕ್ರೆಟರಿಗಳೂ ಸಂಬಳವನ್ನು ಪಡೆಯುತ್ತಿದ್ದಾರೊ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಗವರ್ನಮೆಂಟ್ ಆರ್ಡರ್ ಪ್ರಕಾರ ಅವರನ್ನು ನೇಮಕ ಮಾಡಿದ್ದೇವೆ, ಜಾರಿಯಲ್ಲಿರುವ ಆರ್ಡರ್ ಪ್ರಕಾರ ಅವರಿಗೆ ಸಂಬಳ ದೊರೆಯುತ್ತಾ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 4 ಡಿವಿಜನ್ನುಗಳಲ್ಲಿ ವಿಲೇಜು ಅಕೌಂಟೆಂಟುಗಳು ಎಷ್ಟು ಬೇಕು-ಎಂದು ಅಂಕ ಅಂಶಗಳಿವೆಯೊ ? ಹಾಗಿದ್ದರೆ, ಈಗ ಮಾಡಿರುವುದನ್ನು ನೋಡಿದರೆ, ಇದು half-hearted measure ಎಂದು ಕಾಣುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—Half-hearted ಏನೂ ಅಲ್ಲ. ಫುಲ್ ಹಾರ್ಟೆಡ್ದೇ. 4 ಸಾವಿರ ಜನ ತಲಾಟಿಗಳು ಬೇಕು. 3 ಸಾವಿರ ಜನರನ್ನು ತೆಗೆದುಕೊಂಡು ಟ್ರೈನಿಂಗ್ ಕೊಡುತ್ತಾ ಇದ್ದೇವೆ. ಇಷ್ಟು ಹೊತ್ತಿಗೆ ಸ್ಪೇ ಆರ್ಡರ್ ಬಂತು. 3 ಸಾವಿರ ಟ್ರೈನಿಂಗ್ ತೆಗೆದುಕೊಂಡವರನ್ನು ಉಪಯೋಗಿಸಿಕೊಳ್ಳುತ್ತಾ ಇದ್ದೇವೆ. ಸುಪ್ರೀಂ ಕೋರ್ಟು ತೀರ್ಪಾನ ಬಂದತಕ್ಷಣ, ಇನ್ನೂ ಒಂದು ಸಾವಿರ ಜನಗಳನ್ನು ನೇಮಿಸಿಕೊಂಡು ಪೂರ್ತಿ ಮಾಡುತ್ತೇವೆ. 4 ಸಾವಿರ ಜನಕ್ಕೂ ಕೆಲಸವಿದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಹಿಂದೆ ಶಾನುಭೋಗರಿಗೆ: ಪಟೇಲರಿಗೆ ಆನರೇರಿಯಮ್ ಅಥವಾ ಸಂಬಳಕ್ಕಾಗಿ ಎಷ್ಟು ಖರ್ಚಾಗುತ್ತಿತ್ತು ಮತ್ತು ಈಗ ಮಾಡಿರುವ ಸೆಕ್ರೆಟರಿಗಳಿಗೆ ಎಷ್ಟು ಖರ್ಚಾಗುತ್ತಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಿಂಗಳಿಗೆ 65 ರೂಪಾಯಿ ಪ್ರಕಾರ 4 ಸಾವಿರ ಜನಕ್ಕೆ ಎಷ್ಟು ಖರ್ಚಾಗಬೇಕೊ ಅಷ್ಟು ಖರ್ಚಾಗುತ್ತಿದೆ. ಹಿಂದೆ ಶಾನುಭೋಗರಿಗೆ ಪೋಟಿಗೆ ವಸೂಲಿಯಲ್ಲಿ ಶೇಕಡ 4 ರಷ್ಟು ಕೊಡುತ್ತಿತ್ತು; ಅವರು ಸಂಬಳಸಾರಿಗೆಗೆ ಕೆಲಸ ಮಾಡುತ್ತಿರಲಿಲ್ಲ; ಗೌರವ ಸ್ಥಾನವೆಂದು ಅವರಲ್ಲಿದ್ದರು. ಆಗ ಅದು ಹೆರಿಡಿಟರಿಯಾಗಿತ್ತು.

ಶ್ರೀ ಅನ್ನದಾನಯ್ಯ.—ಈ ಹೊಸ ನಮೂನೆ ನೇಮಕ ಬಂದಮೇಲೆ, ಕೆಲವು ಶಾನುಭೋಗರು ಕೆಲಸಕಾರ್ಯಗಳಲ್ಲಿ ಅಸಹಕಾರ ಮಾಡುತ್ತಿದ್ದಾರೆಂದು ಗೊತ್ತಾಗಿದೆ, ಅವರ ಮೇಲೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೆರಿಡಿಟರಿ ರೈಟ್ ಹೋಗುತ್ತಿದೆ ಎಂದು ಕೆಲವು ಕಡೆ ಹಳೆಯ ಶಾನುಭೋಗರು ನಯೆ ಶಾನುಭೋಗರ ವಿಷಯದಲ್ಲಿ ಉದಾಸೀನ ಮನೋಭಾವದಿಂದಿರಬಹುದು. ಕೆಲವು ಕಡೆ ಅಸಹಕಾರ ಮಾಡಿರಬಹುದು. ಅಂತಹ ಕಡೆ ಅಫೀಸರುಗಳು ಕೆಲಸ ಅಡ್‌ಜಸ್ಟ್ ಮಾಡಿಕೊಂಡು ನಡೆಸಿದ್ದಾರೆ, ಆದ್ದರಿಂದ ಸರಕಾರಿ ಕೆಲಸಕ್ಕೆ ಅಷ್ಟು ತೊಂದರೆಯಾಗಿಲ್ಲ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್‌ಶಾ.—ಪಂಚಾಯಿತಿ ಸೆಕ್ರೆಟರಿ, ಶಾನುಭೋಗರು ಎಂದು ಬೇರೆ ಬೇರೆ ಇರುವುದರ ಬದಲು ಒಂದೇ ಹುದ್ದೆ ಇರುವುದು ಒಳ್ಳೆಯದಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೊಂಬಾಯಿ ಕರ್ನಾಟಕದಲ್ಲಿ ಹಿಂದೆ ತಲಾಟಿಗಳು ಎಂದಿದ್ದರು. ಪಂಚಾಯಿತಿ ಸೆಕ್ರೆಟರಿಗಳನ್ನು ಬೇರೆ ಕೊಟ್ಟಿದ್ದರು. ಈಗ ಪಂಚಾಯಿತಿ ಸೆಕ್ರೆಟರಿಗಳನ್ನು ತೆಗೆದು, ಎರಡು ಆಫೀಸನ್ನೂ ಒಂದೇ ಮಾಡುವುದಕ್ಕೆ ತೊಂದರೆ ಇದೆ. ಪಂಚಾಯಿತಿ ಸೆಕ್ರೆಟರಿಗಳನ್ನು ತೆಗೆದರೆ, ಅವರಿಗೆ ಏನು ಕೆಲಸ ಕೊಡಬೇಕು ಅನ್ನುವುದು ಗೊತ್ತಿಲ್ಲ. ಅದರಲ್ಲ ಅನೇಕರು ಬಹಳ

(ಶ್ರೀ ಎಂ. ವಿ. ಕೃಷ್ಣಪ್ಪ)

ವಿದ್ಯಾವಂತರಿದ್ದಾರೆ. ಥರ್ಡ್ ಫಾರಂ, ಫೋರ್ತ್ ಫಾರಂವರೆಗೆ ಓದಿದ್ದಾರೆ. ಬಹಳ ಕಡಿಮೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರು ಹೈದರಾಬಾದ್ ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಯಾವರೀತಿ ಆ ಎರಡನ್ನೂ ಒಂದೇ ಮಾಡಬೇಕು ಅನ್ನುವುದನ್ನು ಸರಕಾರ ಪರಿಶೀಲನೆ ಮಾಡಬಾರದೆ ? ಈ ಎಲೇಜ್ ಆಫೀಸರುಗಳು ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡದೆ ಇರುವುದನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಏನೂ ಇಲ್ಲ. ಮಾನ್ಯ ಸದಸ್ಯರಿಗೇ ಗೊತ್ತಿದೆ. ಈಗ ಪಂಚಾಯತಿಗಳ ಉತ್ಪತ್ತಿಯನ್ನೂ ಕೂಡ ಬಹಳ ಜಾಸ್ತಿ ಮಾಡಿದ್ದೇವೆ. ಕಂದಾಯದಲ್ಲಿ ಒಂದು ಭಾಗವನ್ನು ಕೊಡುತ್ತಿದ್ದೇವೆ. ಸಾಮಾನ್ಯ ಉತ್ಪತ್ತಿ ಇರತಕ್ಕ ಪಂಚಾಯತಿಗಳು ಈಗ ಜಾಸ್ತಿ ಯಾಗಿವೆ. ಮನೆಕಂದಾಯವನ್ನು ಲೋಕಲ್‌ಫಂಡಿಗೆ ವಸೂಲು ಮಾಡಲಾಗಿದೆ. ಆದರೂ ಕೆಲವು ಕಡೆಗಳಲ್ಲಿ ಈ ಬಗ್ಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಫ್. ಎಸ್. ತಾವರೆ.—ಕೆಲವು ಕಡೆಗಳಲ್ಲಿ ಶ್ಯಾನುಭೋಗರ ಮೂಲಕ ರ್ಯಾಂಡ್ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಕೆಲಸ ಮಾಡಿಸುತ್ತ, ಜಮೀನುಗಳನ್ನು ಪರಭಾರೆ ಮಾಡುತ್ತಿದ್ದಾರೆ. ಆದರಿಂದಾಗಿ ಪಂಚಾಯತಿ ಕೆಲಸ ಅವರು ಮಾಡಿಲ್ಲ. ಮನೆ ಕಂದಾಯ ವಸೂಲಿ ಕೆಲಸ ಹಾಗೆಯೇ ಉಳಿದಿದೆ. ಆದ್ದರಿಂದ ಆ ವಿಷಯದಲ್ಲಿ ಸರ್ಕಾರ ಏನು ಕ್ರಮವನ್ನು ತೆಗೆದು ಕೊಳ್ಳುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೊಂಬಾಯಿ ಕರ್ನಾಟಕದಲ್ಲಿ ಆ ರೀತಿ ನಡೆದಿದೆಯೆಂದು ನಾನು ಆಗಲೇ ಹೇಳಿದೆ. ನಾನು ಅಲ್ಲಿಗೆ ಒಂದು ಸುತ್ತು ಹೋಗಿದ್ದಾಗ ಅಲ್ಲಿನ ಬಾರಾಬಲೂತಿ ಕೆಲಸ ಮಾಡಬೇಕಾದರೆ ಬಹಳ ಕಷ್ಟ ಇದೆ, ಅದರಿಂದ ಪಂಚಾಯತಿ ಕೆಲಸ ಬೇರೆ ಮಾಡುವುವಕ್ಕಾಗುವುದಿಲ್ಲ. ನಮಗೆ ಹೆಚ್ಚು ಸಂಬಳ ಕೊಡಬೇಕು ಎಂಬುದಾಗಿ ಅಲ್ಲಿನ ಅಧಿಕಾರಿಗಳು ಕೇಳಿದ್ದಾರೆ.

Sri SANJEEVANATH AIKALA.—Is it a fact that a large number of Patels and Shanbogues have been appointed as Panchayat Secretaries without training ? In such circumstances, how can they perform their duties ?

Sri M. V. KRISHNAPPA.—The question is about new Accountants appointed by the Government to replace the old Shanbogues.

Sri SANJEEVANATH AIKALA.—In South Kanara Patels and Shanbogues have been appointed as Panchayat Secretaries and they are not trained.

Sri M. V. KRISHNAPPA.—They will get trained people very soon.

Promotions in Police Department.

*Q.—54. Sri SIDDAIAH KASHIMATH (Shirhatti).—

Will the Government be pleased to state :—

(*a*) the number of Deputy Superintendents of Police that have been promoted as Superintendents of Police in Mysore State during the last three years ;

(*b*) the basis on which the promotions were made ?